**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು – 560 001.**

ಸಂಖ್ಯೆ:ಸಿ3[1].ಅ.ಶಿ.ನೇ: 04/2014–15 ದಿನಾಂಕ: 07.08.2015

**ಜ್ಞಾಪನ**

ವಿಷಯ: ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ 194.ಎಸ್.ಟಿ.ಬಿ.2013.(ಭಾಗ) ಬೆಂಗಳೂರು .ದಿನಾಂಕ: 17.07.2015

2. ಈ ಕಛೇರಿ ಜ್ಞಾಪನ ಸಮ ಸಂಖ್ಯೆ ದಿನಾಂಕ 17.07.2015

3. ಸರ್ಕಾರದ ಆದೇಶ ಸಂಖ್ಯೆ:ಇಡಿ 194.ಎಸ್.ಟಿ.ಬಿ.2013.(ಭಾಗ) ಬೆಂಗಳೂರು, ದಿನಾಂಕ: 29.07.2015

--000--

ಉಲ್ಲೇಖ–1ರ ಸರ್ಕಾರದ ಆದೇಶದಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿ ಮೇರೆಗೆ, ನೇರ ನೇಮಕಾತಿ ಮೂಲಕ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳುವವರೆಗೆ ಮಾತ್ರ ಹಾಗೂ ಇತರೆ ಷರತ್ತುಗಳನ್ನು ಒಳಪಡಿಸಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗಾಗಿ 9511 ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅನುಮತಿಯನ್ನು ನೀಡಿರುತ್ತಾರೆ. ಸರ್ಕಾರದ ಅನುಮತಿಯಂತೆ ಉಲ್ಲೇಖ(2)ರ ಈ ಕಛೇರಿ ಜ್ಞಾಪನದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 9511 ಅತಿಥಿ ಶಿಕ್ಷಕರ ಹುದ್ದೆಗಳ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ.

ಪ್ರಸ್ತುತ ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ ಹೆಚ್ಚುವರಿಯಾಗಿ ಪ್ರಾಥಮಿಕ ಶಾಲೆಗಳಲ್ಲಿ 5869 ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರವು ಅನುಮತಿಯನ್ನು ನೀಡಿದ್ದು ಅದರಂತೆ ಈ ಪತ್ರದಲ್ಲಿ ತಿಳಿಸಿರುವಂತೆ ಹೆಚ್ಚುವರಿಯಾಗಿ ಜಿಲ್ಲಾವಾರು ಅತಿಥಿ ಶಿಕ್ಷಕರನ್ನು ಹಂಚಿಕೆ ಮಾಡಿದೆ.

ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವಾಗ ಉಲ್ಲೇಖ(1) ಮತ್ತು (3)ರ ಸರ್ಕಾರದ ಆದೇಶದಲ್ಲಿನ ಈ ಕೆಳಕಂಡ ಷರತ್ತುಗಳನ್ನು ತಪ್ಪದೇ ಪಾಲಿಸಲು ತಿಳಿಸಿದೆ.

1. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ ಎಲ್ಲಾ ಜಿಲ್ಲೆಗಳಲ್ಲಿ ಸಮಾನವಾಗಿ ಇಲ್ಲದಿರುವುದರಿಂದ ಮತ್ತು ಕೆಲವು ಜಿಲ್ಲೆಗಳಲ್ಲಿ ಹೆಚ್ಚುವರಿ ಶಿಕ್ಷಕರು ಇರುವುದು ಕಂಡು ಬಂದಿರುವುದರಿಂದ ಶಿಕ್ಷಕರನ್ನು ಮರು ಹಂಚಿಕೆ ಮಾಡಲು ತುರ್ತಾಗಿ ಕ್ರಮ ಕೈಗೊಳ್ಳುವುದು
2. ಶಿಕ್ಷಕರ ನೇಮಕಾತಿ ಹಾಗೂ ಶಾಲಾವಾರು ಹಂಚಿಕೆ ಬಗೆಗಿನ ನೀತಿಗಳನ್ನು ಇಲಾಖೆ ಸುಧಾರಿಸುವ ಕ್ರಮವಾಗಿ (Rationalise) ಮಾಡುವುದು.
3. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಹೆಚ್ಚುವರಿ ಶಿಕ್ಷಕರು ಇರುವುದು ಕಂಡುಬಂದಿದ್ದು, ಅವಶ್ಯಕತೆ ಇರುವ ಕಡೆ ಮರು ಹಂಚಿಕೆಮಾಡುವುದು.
4. ಶಿಕ್ಷಕರ ಸಂಪನ್ಮೂಲವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
5. ಅನುದಾನಿತ ಶಾಲೆಗಳಲ್ಲಿ ಇರುವ ಹೆಚ್ಚುವರಿ ಶಿಕ್ಷಕರನ್ನು ಕೊರತೆ ಇರುವ ಸರ್ಕಾರಿ ಶಾಲೆಗಳಲ್ಲಿ (O.O.D) ಆಧಾರದ ಮೇಲೆ ಹಂಚಿಕೆ ಮಾಡುವುದು.
6. ಶಿಕ್ಷಕರು ಕೊರತೆ ಇರುವ ಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರು ಇರುವ ಶಾಲೆಗಳಿಂದ ಕೂಡಲೇ ಮರು ವಿನ್ಯಾಸಿಸಲು ಕ್ರಮ ವಹಿಸುವುದು.
7. ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಅತಿಥಿ ಶಿಕ್ಷಕರ ಆಯ್ಕೆ ಜವಾಬ್ದಾರಿಯನ್ನು ಸಂಬಂಧಿಸಿದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರೇ ಮಾಡತಕ್ಕದ್ದು.
8. ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರನ್ನು ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ನೇಮಿಸುವುದು.
9. ನೇಮಕಾತಿಗೆ ಅಧಿಸೂಚಿಸಿದ ಪ್ರಾಥಮಿಕ ಶಿಕ್ಷಕರು ನೇಮಕಗೊಂಡು ಕರ್ತವ್ಯಕ್ಕೆ ಹಾಜರಾದ ತಕ್ಷಣ ಅತಿಥಿ ಶಿಕ್ಷಕರ ಹುದ್ದೆಗಳು ತಂತಾನೆ ರದ್ದಾಗುವುದು.

Athithi_Shik

10. ಅತಿಥಿ ಶಿಕ್ಷಕರನ್ನು ಆಯಾ ಹುದ್ದೆಗೆ ನಿಗಧಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನು ಪರಿಗಣಿಸಿ ಮೆರಿಟ್ ಆಧಾರದಲ್ಲಿ ಆಯ್ಕೆ ಮಾಡತಕ್ಕದ್ದು.
11. ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರ ಗೌರವಧನ ಮಾಹೆಯಾನ ರೂ 5.500/- ನಿಗಧಿಪಡಿಸಿ, ಈ ಹಿಂದಿನ ಸಾಲುಗಳಲ್ಲಿ ಭರಿಸಿದ ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.
12. ಅತಿಥಿ ಶಿಕ್ಷಕರ ಹಾಜರಾತಿ ಕುರಿತು ಪ್ರತ್ಯೇಕ ಹಾಜರಾತಿ ವಹಿಯಲ್ಲಿ ನಿರ್ವಹಿಸುವುದು.

ಮೇಲೆ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಚಾಚೂ ತಪ್ಪದೇ ಪಾಲಿಸಲು ಸಂಬಂಧಿಸಿದ ಉಪನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರಿಗೆ ಈ ಮೂಲಕ ಸೂಚಿಸಿದೆ. ಯಾವುದೇ ಲೋಪಗಳಾದಲ್ಲಿ ಸಂಬಂಧಿಸಿದ ಕಛೇರಿ ಸಿಬ್ಬಂದಿ/ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ಸಂಬಂಧ ಇಲಾಖಾ ವೆಬ್-ಸೈಟ್ ನಲ್ಲಿ ಪ್ರಕಟಣೆ ನೀಡಲಾಗಿದೆ. ಆಯ್ಕೆಮಾಡಿಕೊಂಡ ಶಿಕ್ಷಕರ ವಿವರವನ್ನು ತಾಲ್ಲೂಕುವಾರು / ಜಿಲ್ಲಾವಾರು ಕ್ರೋಡೀಕರಿಸಿ ಈ ಕಛೇರಿಗೆ ಮರುಟಪಾಲಿನಲ್ಲಿ ಸಲ್ಲಿಸಲು ತಿಳಿಸಿದೆ.

ಈ ಕೆಳಕಂಡಂತೆ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ.

**2015-16ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿಯಾಗಿ ಮಂಜೂರುಮಾಡಿರುವ ಅತಿಥಿ ಶಿಕ್ಷಕರ ವಿವರ**

| ಕ್ರಸಂ | ಜಿಲ್ಲೆಯ ಹೆಸರು | ಈಗಾಗಲೇ ಅನುಮತಿ ನೀಡಿರುವ ಅತಿಥಿ ಶಿಕ್ಷಕರ ಸಂಖ್ಯೆ | 2ನೇ ಕಂತಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಅತಿಥಿ ಶಿಕ್ಷಕರ ಸಂಖ್ಯೆ | ಒಟ್ಟು ಜಿಲ್ಲೆಗೆ ನೀಡಿರುವ ಅತಿಥಿ ಶಿಕ್ಷಕರ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1 | ಬೆಂಗಳೂರು ಉತ್ತರ | 72 | 0 | 72 |
| 2 | ಬೆಂಗಳೂರು ದಕ್ಷಿಣ | 172 | 76 | 248 |
| 3 | ಬೆಂಗಳೂರು ಗ್ರಾಮಾಂತರ | 166 | 53 | 219 |
| 4 | ರಾಮನಗರ | 199 | 406 | 605 |
| 5 | ಚಿಕ್ಕಬಳ್ಳಾಪುರ | 192 | 114 | 306 |
| 6 | ಕೋಲಾರ | 168 | 228 | 396 |
| 7 | ಶಿವಮೊಗ್ಗ | 281 | 250 | 531 |
| 8 | ಚಿತ್ರದುರ್ಗ | 157 | 192 | 349 |
| 9 | ದಾವಣಗೆರೆ | 181 | 85 | 266 |
| 10 | ಮಧುಗಿರಿ | 130 | 150 | 280 |
| 11 | ತುಮಕೂರು | 110 | 210 | 320 |
| 12 | ಚಾಮರಾಜನಗರ | 192 | 140 | 332 |
| 13 | ಉಡುಪಿ | 110 | 59 | 169 |
| 14 | ಮಂಡ್ಯ | 104 | 353 | 457 |
| 15 | ಚಿಕ್ಕಮಗಳೂರು | 112 | 112 | 224 |
| 16 | ಮೈಸೂರು | 306 | 289 | 595 |
| 17 | ಹಾಸನ | 122 | 184 | 306 |
| 18 | ಕೊಡಗು | 43 | 113 | 156 |
| 19 | ದಕ್ಷಿಣ ಕನ್ನಡ | 300 | 201 | 501 |
| 20 | ಬೆಳಗಾವಿ | 308 | 50 | 358 |
| 21 | ಹಾವೇರಿ | 300 | 49 | 349 |

| ಕ್ರ.ಸಂ | ಜಿಲ್ಲೆಯ ಹೆಸರು | ಈಗಾಗಲೇ ಅನುಮತಿ ನೀಡಿರುವ ಅತಿಥಿ ಶಿಕ್ಷಕರ ಸಂಖ್ಯೆ | 2ನೇ ಕಂತಿನಲ್ಲಿ ಹೆಚ್ಚುವರಿಯಾಗಿ ನೀಡಿರುವ ಅತಿಥಿ ಶಿಕ್ಷಕರ ಸಂಖ್ಯೆ | ಒಟ್ಟು ಜಿಲ್ಲೆಗೆ ನೀಡಿರುವ ಅತಿಥಿ ಶಿಕ್ಷಕರ ಸಂಖ್ಯೆ |
|---|---|---|---|---|
| 22 | ಶಿರಸಿ | 342 | 156 | 498 |
| 23 | ಬಾಗಲಕೋಟೆ | 365 | 232 | 597 |
| 24 | ಗದಗ | 216 | 41 | 257 |
| 25 | ಚಿಕ್ಕೋಡಿ | 625 | 344 | 969 |
| 26 | ವಿಜಯಪುರ | 626 | 68 | 694 |
| 27 | ಧಾರವಾಡ | 337 | 0 | 337 |
| 28 | ಕಾರವಾರ(ಉತ್ತರಕನ್ನಡ) | 68 | 76 | 144 |
| 29 | ಬಳ್ಳಾರಿ | 612 | 215 | 827 |
| 30 | ಕಲಬುರಗಿ | 666 | 313 | 979 |
| 31 | ಬೀದರ್ | 506 | 67 | 573 |
| 32 | ಕೊಪ್ಪಳ | 417 | 325 | 742 |
| 33 | ಯಾದಗಿರಿ | 573 | 200 | 773 |
| 34 | ರಾಯಚೂರು | 433 | 518 | 951 |
| | ಒಟ್ಟು | 9511 | 5869 | 15380 |

7/8/15

(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ

ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಇವರಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ಇವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಇವರ ಮಾಹಿತಿಗಾಗಿ
3. ಕಛೇರಿ ಪ್ರತಿ